**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No.182/2018**

ದಿನಾಂಕ**:09.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಖ್ಯ ವಿಚಾರಣೆ ಎದುರುದಾರರ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ**.** ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ**.**

ಪಾಟೀ ಸವಾಲು ಅರ್ಜಿದಾರರ ಪರ ವಕೀಲರಿಂದ

ಬೊಮ್ಮನಹಳ್ಳಿ ಗ್ರಾಮದ ಸರ್ವೇ ನಂ.46 ರಲ್ಲಿ 2 ಎಕರೆ 33 ಗುಂಟೆ ನಮ್ಮ ಯೋಜನೆಗೆ ಸ್ವಾಧೀನಪಡಿಸಿಕೊಂಡಿದೆ. ರಾಷ್ಟ್ರೀಯ ಹೆದ್ದಾರಿ ಬೊಮ್ಮನಹಳ್ಳಿ ಗ್ರಾಮ ಮಧ್ಯದಲ್ಲಿ ಹಾದು ಹೋಗಿದೆ ಅಂದರೆ ಸರಿ. ಸದರಿ ಬೊಮ್ಮನಹಳ್ಳಿ ಗ್ರಾಮ 12 ಕಿಮೀ ಇದೆ ಅಂದರೆ ಸರಿ. ಆ ಕಾರಣಕ್ಕಾಗಿ ನಗರಕ್ಕೆ ಹತ್ತಿರವಿರುದರಿಂದ ಹೆಚ್ಚಿನ ಬೆಲೆ ಇದೆ ಅಂದರೆ ಸರಿ. ಅವಾರ್ಡ್ ತಃಖ್ತೆಯಲ್ಲಿ ಹೇಳಿರುವ ಮರಗಳಿಗೆ ಭವಿಷ್ಯದ ಆದಾಯವನ್ನು ಪರಿಗಣಿಸದೇ ಪರಿಹಾರವನ್ನು ನೀಡಿದ್ದೀರಿ ಅಂದರೆ ಸರಿಯಲ್ಲ . ಸದರಿ ಜಮೀನಿನ ಮಧ್ಯ ರೈಲ್ವೆ ಟ್ರ್ಯಾಕ್ಟ್ ಹಾದುಹೋಗಿರುವುದರಿಂದ ಸದರಿ ಜಮೀನು ವ್ಯವಸಾಯಕ್ಕೆ ಯೋಗ್ಯವಲ್ಲ ಅಂದರೆ ಸರಿಯಲ್ಲ. ಮಧ್ಯ ಹಾದು ಹೋಗಿರುವುದರಿಂದ ಸದರಿ ಜಮೀನಿನ ಮಾರುಕಟ್ಟೆ ಬೆಲೆ ಕುಂಠಿತವಾಗಿದೆ ಅಂದರೆ ಸರಿಯಲ್ಲ. ಪರಿಹಾರ ನೀಡಿರುವುದು ನೈಸರ್ಗಿಕವಾಗಿ ಸರಿಯಾಗಿಲ್ಲ ಹೆಚ್ಚಿನ ಪರಿಹಾರ ಕೊಡಬೇಕು ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು